
ಎಷ್ಟೋತ್ತನಾ ಆಗ್ಲಿ ನಾ ಹೋಗ್ತೀನಿ' ಅಂತ ಬಾಗಿಲಲ್ಲಿ ಇದ್ದ ಪ್ಯಾರಗಾನ್ ಚಪ್ಪಲಿ ಹಾಕ್ಕೊಂಡು ಬಡಬಡ ಹೊಸಿಲು ದಾಟಿ ನಡೆದೇಬಿಟ್ಟ. 'ಹೇ ರಾಮ, ಲೇ ರಾಮಚಂದ್ರ, ಬಸ್‌ಸ್ಟ್ಯಾಂಡ್ ತನಕ ಬಿಟ್ಟು ಬರ್ತೀನಿ ತಡಿ' ಅಂತ ಮಂಜುನಾಥ ತನ್ನ ಅಟ್ಲಾಸ್ ಸೈಕಲ್ ತಗೊಂಡು ರಾಮಚಂದ್ರನನ್ನು ಬಸ್‌ಸ್ಟ್ಯಾಂಡ್‌ಲಿ ಬಿಟ್ಟು ಬಸ್ಸಿಗೆ ಕುಂದ್ರಿಸಿ, ತನ್ನ ಕಿಸೆಯಲ್ಲಿದ್ದ ಇಪ್ಪತ್ತೋ ಐವತ್ತೋ ರೂಪಾಯಿ ಕೊಟ್ಟ. ರಾಮಚಂದ್ರ ಬೇಡ ಬೇಡ ಅಂದರೂ ಕೇಳದೆ ರಾಮಚಂದ್ರನ ಕಿಸೆಯಲ್ಲಿ ತುರುಕಿ ಮಂಜುನಾಥ ಕಣ್ಣೀರಾಗುತ್ತಾ ಗೆಳೆಯನಿಗೆ ಟಾಟಾ ಮಾಡಿದ.

ಪಿ.ಯೂ.ಸಿ.ಯಿಂದಲೂ ಮಂಜುನಾಥ ಮತ್ತು ರಾಮಚಂದ್ರ ಒಂದೇ ಕಾಲೇಜು, ಒಂದೇ ಹಾಸ್ಟೆಲ್. ಎಂ.ಎ. ಮಾಡುತ್ತಿದ್ದ ಇಬ್ಬರೂ ಮುಂದೆ ಐ.ಎ.ಎಸ್. ಬರೆಯುವ ಕನಸು ಹೊಂದಿದವರು. ರಾಮಚಂದ್ರನೋ ಧೈರ್ಯ ಮಾಡಿ ಬಸ್ಸು ಹತ್ತಿ ಕೂತ. ಆ ರಾತ್ರಿ ಹೊತ್ತಿನಲ್ಲಿ ಬಸ್ಸು ತಮ್ಮೂರಿನ ಕ್ರಾಸಿಗೆ ಇಳಿಸಿ ಮುಂದಕ್ಕೆ ಹೋದಾಗ, ರಾಮಚಂದ್ರನಿಗೆ ದಿಕ್ಕು ತೋಚದಂತಾಗಿ ಆ ದಟ್ಟ ರಾತ್ರಿ, ನಾಯಿಗಳ ಬೊಗಳುವಿಕೆ, ಒಂದು ಕೆಟ್ಟ ಕನಸಂತೆ ಭಾಸವಾಗಿ ಏನೂ ತೋಚದೆ ಗಟ್ಟಿ ಧೈರ್ಯ ಮಾಡಿ ನಡೆಯತೊಡಗಿದ. ಒಂದು ಹತ್ತು ಹೆಜ್ಜೆ ಇಟ್ಟಿಲ್ಲ, ಎದೆಯಲ್ಲಿ ಢವ ಢವ ಅಂತ ಭಯ ಶುರುವಾಯಿತು. ಇನ್ನೂ ಸುಮಾರು ನಾಲ್ಕು ಕಿ.ಮೀ. ನಡೆಯಬೇಕು. ಊರ ಮುಂದಿನ ಹಳ್ಳದ ದಡಕ್ಕೆ ಹೊಂದಿಕೊಂಡಂತಿರುವ ಸ್ಮಶಾನವನ್ನು ನೆನಪಿಸಿಕೊಂಡು ರಾಮಚಂದ್ರನಿಗೆ ಕುಂಡೆಯಲ್ಲಿ ಪುಕುಪುಕು ಅನ್ನತೊಡಗಿತು. ಹಳ್ಳದ ಪಕ್ಕದ ಸ್ಮಶಾನದಲ್ಲಿ ತನ್ನ ಚಿಕ್ಕಂದಿನಲ್ಲಿ ಆಡಿ ಬೆಳೆಸಿದ ದೊಡಪ್ಪನ ಸಮಾಧಿ, ದಿನಾಲು ಹೋಟೆಲ್‌ಗೆ ಹಾಲು ಕೊಡುತ್ತಿದ್ದ ಕಂದ್ಲಿ ಹನುಮಂತನ ಹೆಂಡತಿ ಉರ್ಲು ಹಾಕಿಕೊಂಡು ಸತ್ತಾಗ ಮಣ್ಣು ಮಾಡಿದ ಗುಟ್ಟೆ, ಪಕ್ಕದ ಮನೆಯ ಅಮರಮ್ಮ ಅತ್ತೆ, ನ್ಯಾಯಬೆಲೆ ಅಂಗಡಿಯಲ್ಲಿ ಮುಪ್ಪಾನು ಮುದುಕಿಯಾಗುವವರೆಗೂ ದುಡಿದು ಸತ್ತ ಗಡಗಡ ಗಂಗಮ್ಮನ ಸಮಾಧಿ, ಇನ್ನೂ ಊರಲ್ಲಿನ ಹಲವಾರು ಜನ ಸತ್ತವರ ಬಗ್ಗೆ ಬೇಡ ಬೇಡ ಅಂದರೂ ನೆನಪಿಗೆ ಬಂದು ಭಯಗೊಂಡ. ಆದರೂ ಅವನ ಆತ್ಮಸ್ಥೈರ್ಯ ಮುನ್ನುಗ್ಗು ಅಂತ ಹೇಳುತ್ತಿದ್ದರೂ ಬುದ್ಧಿ ಹಿಂದೇಟು ಹಾಕುತ್ತಿತ್ತು. ಸುಮಾರು ಅರ್ಧ ಕಿ.ಮೀ. ನಡೆದಿರಬೇಕು, ಅಲ್ಲಿ ಬಸವಣ್ಣನ ಗುಡಿ ಬಂತು. ತಾನು ಹೈಸ್ಕೂಲ್ ಓದುತ್ತಿದ್ದಾಗ ಇದೇ ಗುಡಿಯನ್ನು ದಾಟಿ ಹೋಗುತ್ತಿರಬೇಕಾದರೆ ಇದರ ಹಿಂದೆ ಇದ್ದ ಬಾವಿಯ ಮೇಲೆ ಕುಳಿತು ಗುಡಿಯಲ್ಲಿ ದೇವರಿಗೆ ನಮಸ್ಕಾರ ಮಾಡಿ ದೇವರ ಮುಂದಿದ್ದ ಎರಡು ಮೂರು



ರೂಪಾಯಿ ಕಿಸೆಗೆ ಹಾಕಿಕೊಂಡಿದ್ದು ನೆನಪಾಗಿ, ಗುಡಿಯ ಕಡೆಗೆ ನೋಡುವುದಕ್ಕೆ ಮನಸ್ಸಾಗದೆ ಆ ನಾಲ್ಕು ಹೆಜ್ಜೆಗಳನ್ನು ದಡದಡನೆ ಓಡುತ್ತಾ ನಡೆದು ಆ ಗುಡಿಯನ್ನು ದಾಟಿ 'ಅಬ್ಬಾ!' ಅಂತ ಉಸಿರುಬಿಟ್ಟ. ಸ್ವಲ್ಪ ಮುಂದಕ್ಕೆ ಹೋದರೆ ಒಂದು ಆಂಧ್ರದವರ ಮನೆಯ ಹೊರಗೆ ರೋಡಿಗೆ ಅಂಟಿಕೊಂಡು ಒಂದು ಬೋರ್‌ವೆಲ್ ಇತ್ತು. ತಾವು ಶಾಲೆಗೆ ಹೋಗುವಾಗ ಆ ಬೋರ್‌ವೆಲ್‌ನ ಸಿಹಿಯಾದ ನೀರು ಕುಡಿಯದೇ